ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. Ambedkar Veedhi, Bengaluru - 560001
Office of the Registrar (Evaluation),
Bengaluru Central University, Bengaluru
Ph.No:080-22295559, E-Mail ID:registrarevlubcu@gmail.com

ಸಂಖ್ಯೆ. ಬಿಸಿಯು/01/ಪರೀಕ್ಷಾ/ಪ.ಶು.ಅಧಿಸೂಚನೆ/2020 ದಿನಾಂಕ: 29.07.2020

# ವಿದ್ಯಾರ್ಥಿಗಳ ಗಮನಕ್ಕೆ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ (ಎರಡು ಮತ್ತು ನಾಲ್ಕನೇ ಸೆಮಿಸ್ಟರ್) ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಕೆಳಕಂಡ ಅಂಶಗಳನ್ನು ಗಮನಿಸಲು ಸೂಚಿಸಿದೆ.

ಎರಡು ಮತ್ತು ನಾಲ್ಕನೇ ಸೆಮಿಸ್ಟರುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ದಿನಾಂಕ **23.03.2020** ರಲ್ಲಿ ಅಧಿಸೂಚನೆ ನೀಡಲಾಗಿತ್ತು. ಸಾಂಕ್ರಾಮಿಕ ರೋಗ ಕೋವಿಡ್–**19**ರ ಕಾರಣದಿಂದ ತರಗತಿಯಲ್ಲಿ ನಡೆಯಬೇಕಾದ ಪಾಠ ಪ್ರವಚನವನ್ನು ರದ್ದುಪಡಿಸಿ, ಆನ್‌ಲೈನಿನಲ್ಲಿ ಪಾಠಗಳನ್ನು ಹೇಳಿಕೊಡುವ ವ್ಯವಸ್ಥೆ ಜಾರಿಗೆ ಬಂದಿದ್ದರಿಂದ, ಕೆಲವು ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿರುವುದಿಲ್ಲ. ಇವರುಗಳ ಅನುಕೂಲಕ್ಕಾಗಿ ದಿನಾಂಕ **24.07.2020** ರಂದು ಪರೀಕ್ಷಾ ಶುಲ್ಕವನ್ನು ದಂಡ ಶುಲ್ಕವಿಲ್ಲದೆ ಪಾವತಿಸಲು ದಿನಾಂಕವನ್ನು **15.08.2020**ರವರೆಗೆ ವಿಸ್ತರಿಸಲಾಗಿದೆ. ಆದುದರಿಂದ ಇದುವರೆವಿಗೂ ಪರೀಕ್ಷಾ ಶುಲ್ಕ ಪಾವತಿಸಿಲ್ಲದ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಸ್ನಾತಕ ಪದವಿಯ ವಿದ್ಯಾರ್ಥಿಗಳು ದಿನಾಂಕ **15.08.2020**ರೊಳಗೆ ಪರೀಕ್ಷಾ ಶುಲ್ಕವನ್ನು ಪಾವತಿಸಿ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಸೂಚಿಸಲಾಗಿದೆ. ಕರ್ನಾಟಕ ಸರ್ಕಾರದ ದಿನಾಂಕ **10.07.2020**ರ ಆದೇಶದಂತೆ ಸ್ನಾತಕ 2ನೇ ಮತ್ತು 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲಾಗುವುದಿಲ್ಲ, ಬದಲಾಗಿ ಆಂತರಿಕ ಮತ್ತು ಹಿಂದಿನ ಸೆಮಿಸ್ಟರ್‌ನ ಅಂಕಗಳ ಸರಾಸರಿಯೊಂದಿಗೆ ಫಲಿತಾಂಶ ನೀಡಲಾಗುತ್ತದೆ.

ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿ ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಕುಲಸಚಿವರು (ಮೌಲ್ಯಮಾಪನ)

Registrar (Evaluation)
Bengaluru Central University
Central College Campus
Bengaluru - 560 001

ಗೆ,

1. ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರಲು ವಿದ್ಯಾರ್ಥಿ ಪೋರ್ಟಲ್ ಮತ್ತು ಕಾಲೇಜು ಪೋರ್ಟಲ್ ನಲ್ಲಿ ಪ್ರಕಟಿಸಲು ವೆಬ್ಸೈಟ್ ನಿರ್ವಾಹಕರಿಗೆ ಕಳಿಸಲಾಗಿದೆ. ನೋಡಬಹುದು.
2. ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.

ಪ್ರತಿಗಳು:

ಕುಲಪತಿ/ಕುಲಸಚಿವ/ಕುಲಸಚಿವ(ಮೌ)/ವಿತ್ತಾಧಿಕಾರಿಯವರ ವಿಶೇಷಾಧಿಕಾರಿಗಳಿಗೆ.